


ಹಂದಲಗೆರೆ ಗಿರೀಶ್
ಕಲೆ: ರೂಪಶ್ರೀ ಕಲ್ಲಿಗನೂರು

# ಬೆತ್ತಲೆ ಜಗತ್ತು



ಅವನೊಬ್ಬ
ವಿಳಾಸವಿಲ್ಲದ ಸಂತ
ದೇಶಕ್ಕೆಲ್ಲಾ ಸ್ವಂತ
ಬಹುರೂಪಿ
ತೊಟ್ಟ ಪೋಷಾಕು
ಅರಸಿ ಬಂದಪ್ಪಿದ
ಬಿರುದು ಬಾವಲಿಗಳು
ಒಳಗೇ ಅವಿತ್ತಿದ್ದ
ಕಾಮ ಕ್ರೋಧ ಮೋಹ
ಕಾಲಿಗೆ ತೊಡರುತ್ತಿದ್ದ ಅಧಿಕಾರ
ಎಲ್ಲವನ್ನೂ
ಒಂದೊಂದೇ ಕಳಚಿಟ್ಟು
ಮಹಾತ್ಮನಾದ
ನಿರಾಯುಧಿ
ಗಾಂಧಿಯ ಹೆಸರು
ನೆತ್ತರು ಉಸಿರು
ಖಾದಿ ಚರಕ ಟೋಪಿ
ಎಲ್ಲವನ್ನೂ
ದೋಚಿದೆ ದುರಾಸೆಯ
ಬೆತ್ತಲೆ ಜಗತ್ತು
ಅವನ ಸರಳತೆಯೊಂದನ್ನು ಬಿಟ್ಟು!

